ಕುಂದಾಪುರ ಕ್ಷೇತ್ರ ಶಂಕರ ನಾರಾಯಣ ಗ್ರಾಮದಿಂದ ಅಂಪಾರಿಗೆ ಹೋಗುವ ಹೆರಾಸ ರಸ್ತೆ ನಿರ್ಮಾಣ

೭೭೬. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಕ್ಷೇತ್ರದ ಶಂಕರನಾರಾಯಣ ಗ್ರಾಮದಿಂದ ಅಂಪಾರಿಗೆ ಹೋಗುವ ಕಾಲದಾರಿಗೆ ಹೊಸ ರಸ್ತೆ ರಚಿಸುವ ಯೋಜನೆ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ನಡ್ಕಕ್ಕೆ ಈ ರಸ್ತೆಯನ್ನು ಮಾಡುವ ಪ್ರಸ್ತಾವನೆ ಇಲ್ಲ.

ಆ) ರಸ್ತೆಯ ರಚನೆಗೆ ೧.೮೦ ಲಕ್ಷ ರೂಪಾಯಿಗಳು ಹಾಗೂ ಕಾಲು ಸಂಕ ನಿರ್ಮಾಣಕ್ಕೆ ೧.೦೦ ಲಕ್ಷ ರೂ.ಗಳು ಹೀಗೆ ಒಟ್ಟು ೨.೫೦ ಲಕ್ಷ ರೂ.ಗಳು ಬೇಕಾಗಬಹುದು.

ಉಪ ಸಂರಕ್ಷಣಾಧಿಕಾರಿಗಳಿಗೆ ಬಡ್ತಿ ನೀಡಿರುವ ಬಗ್ಗೆ

೧೦೬೫. ಶ್ರೀ ಆರ್.ಎನ್. ನಾಯ್ಕ (ಭಟ್ಕಳ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫ನೇ ಇಸವಿ ಡಿಸೆಂಬರ್ ಮಾಹೆಯಲ್ಲಿ ಉಪ-ಸಂರಕ್ಷಣಾಧಿಕಾರಿಯಾಗಿ ಬಡ್ತಿ ನೀಡಲಾದ ಅಧಿಕಾರಿಗಳ ಸಂಖ್ಯೆ ಎಷ್ಟು? ಹಾಗೂ ಅವರುಗಳು ಕೆಲಸ ಮಾಡುತ್ತಿರುವ ಸ್ಥಳಗಳ ವಿವರಗಳನ್ನು ನೀಡುವುದು.

ಆ) ವರ್ಗಾವಣೆ ಆದೇಶ ಹೊರಡಿಸಿದ ಮೇಲೂ ಅದೇ ಸ್ಥಳದಲ್ಲಿ ಕೆಲಸ ಮುಂದುವರಿಸುತ್ತಿರುವವರ ಸಂಖ್ಯೆ ಎಷ್ಟು? ಹಾಗೂ ಅವರ ಹೆಸರುಗಳೇನು?

ಇ) ಹಾಗಿದ್ದಲ್ಲಿ ಸದರಿ ಅಧಿಕಾರಿಗಳನ್ನು ಅದೇ ಸ್ಥಳದಲ್ಲಿ ಮುಂದುವರಿಸಲು ಕಾರಣವೇನು?

ಶ್ರೀ ಬಿ.ಜೀವಿಜಯ (ರಾಜ್ಯ ಅರಣ್ಯ ಮಂತ್ರಿಗಳು).—

ಅ) ಒಬ್ಬ ಅಧಿಕಾರಿಗೆ ಉಪಸಂರಕ್ಷಣಾಧಿಕಾರಿಯಾಗಿ ಬಡ್ತಿ ನೀಡಿ ವರ್ಕಿಂಗ್ ಪ್ಲಾನ್ ವಿಭಾಗ ಬೆಂಗಳೂರಿನಲ್ಲಿ ನೇಮಿಸಲಾಗಿದೆ. ಇನ್ನೊಬ್ಬರನ್ನು ಅವರ ಸಂಬಳ ಮತ್ತು ಸ್ಕೇಲಿನಲ್ಲಿಯೇ ರಾಯಚೂರಿನ ಸಾಮಾಜಿಕ ಅರಣ್ಯ ವಿಭಾಗಕ್ಕೆ ನೇಮಿಸಲಾಗಿದೆ.

ಆ) ಶ್ರೀ ಜೆ.ಎಸ್. ಪ್ರಭು, ವಿಭಾಗ ಅರಣ್ಯಾಧಿಕಾರಿಗಳು ಇವರಿಗೆ ಹೊನ್ನಾವರದಿಂದ ಬೆಂಗಳೂರಿಗೆ ವರ್ಗವಾಗಿದೆ

ಇ) ಕೈಹಿಡಿದಿರುವ ಕೆಲಸಗಳನ್ನು ಮುಕ್ತಾಯಗೊಳಿಸುವ ದೃಷ್ಟಿಯಿಂದ ವರ್ಗಾವಣೆಯ ಆದೇಶವನ್ನು ಮಾರ್ಚ್ ತಿಂಗಳ ಕೊನೆಯವರೆಗೆ ತಡೆಹಿಡಿಯಲಾಗಿದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಕೆರೆಗಳ ಬಗ್ಗೆ.

೧೦೭೨. ಶ್ರೀ ಬಿ.ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಕೆರೆಗಳೆಷ್ಟು ಹಾಗೂ ಅವುಗಳಲ್ಲಿ ದುರಸ್ತಿ ಮಾಡಬೇಕಾದ ಕೆರೆಗಳ ಸಂಖ್ಯೆ ಎಷ್ಟು ಮತ್ತು ಯಾವುವು?

ಆ) ದುರಸ್ತಿ ಕಾರ್ಯ ಮತ್ತು ಹೂಳು ತೆಗೆಸುವ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆಯೇ?

ಇ) ಹಾಗಿದ್ದಲ್ಲಿ ಆದಕ್ಕಾಗಿ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ಒಟ್ಟು ಕೆರೆಗಳು ೫೩ ದುರಸ್ತಿ ಆಗಬೇಕಾದ ಕೆರೆಗಳು ೨೭ ವಿವರಗಳು ಕೆಳಕಂಡಂತಿವೆ.

೧) ಕುಂಚೂರು ಕೆರೆ (೨) ಮುತ್ತಗಿ ಕೆರೆ (೩) ಹಲವಾಗಲು ಕೆರೆ (೪) ನಿಚ್ಚವ್ವನಹಳ್ಳಿ ಕೆರೆ (೫) ಅಲಮರಸಿ ಕೆರೆ (೬) ಪೂನಬಗಟ್ಟ ಕೆರೆ (೭) ಕಂಚಿಕೆರೆ (೮) ಕಾಳುಮಂಚಿ ಕೆರೆ (೯) ಹರಪನಹಳ್ಳಿ ದೊಡ್ಡಕೆರೆ (೧೦) ಭಾಗಲೀಕೆರೆ (೧೧) ಭಾಗಲೀಕೆರೆ (ಕಲ್ಲೇಶ್ವರ ಗುಡಿ ಹತ್ತಿರ) (೧೨) ಅಲಗಿಲವಾಡ ಕೆರೆ (೧೩) ಚಿರಸ್ತಹಳ್ಳಿಕೆರೆ (೧೪) ನೀಲಗುಂಡ ಕೆರೆ (೧೫) ಪುತ್ತೂರು ಕೆರೆ (೧೬) ಚಿಕ್ಕಮಾಗಲಗೆರೆ ಕೆರೆ (೧೭) ಚಟ್ನಹಳ್ಳಿಕೆರೆ (೧೮) ತೌಡೂರು ಕೆರೆ (೧೯) ವಿ. ಕಲ್ಲಹಳ್ಳಿಕೆರೆ (೨೦) ಸಿರಗನಹಳ್ಳಿಕೆರೆ (೨೧) ಹುಲಿಕಟ್ಟೆಕೆರೆ (೨೨) ಕೂಲಕಳ್ಳಿಕೆರೆ (೨೩) ತೊಗರಿಗಟ್ಟೆ ಕೆರೆ (೨೪) ನಂದಿದೆವೂರು ಕೆರೆ (೨೫) ಚಿಕ್ಕಹಳ್ಳಿಕೆರೆ (೨೬) ಶೃಂಗಾರ ತೋಟಕೆರೆ (೨೭) ನಾರಾಯಣಪುರ ಕೆರೆ.

ಆ) ಹೌದು.

ಇ) ದುರಸ್ತಿ ಕಾರ್ಯ—೭.೨೦ ಲಕ್ಷ ರೂ.ಗಳು

ಹೂಳು ತೆಗೆಯಲು—೭.೨೫ ಲಕ್ಷ ರೂ.ಗಳು

ಸುಳ್ಯ ಕ್ಷೇತ್ರದ ಲೋಕೋಪಯೋಗಿ ಇಲಾಖೆಯಲ್ಲಿನ ಕಾಮಗಾರಿಗಳ ಬಗ್ಗೆ

೧೮೮೯ (ಬಿ). ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ಕ್ಷೇತ್ರದ ಸಾರ್ವಜನಿಕ ಲೋಕೋಪಯೋಗಿ ಇಲಾಖೆಯಲ್ಲಿ ಕಾಮಗಾರಿಗಳನ್ನು ಮಂಜೂರಾದಂತೆ ಆಯಾವ್ಯಯ ವರ್ಷದ ಅಂತ್ಯದೊಳಗೆ ಪೂರ್ತಿಗೊಳಿಸುವಂತೆ ಕ್ರಮ ಕೈಕೊಳ್ಳುವರೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸುಳ್ಯ ಕ್ಷೇತ್ರದಲ್ಲಿ ಮಂಜೂರಾಗಿ ವಿವಿಧ ಹಂತದ ಕಾರ್ಯಾಚರಣೆಯಲ್ಲಿರುವ ಕಾಮಗಾರಿಗಳನ್ನು ಆಯಾ ವರ್ಷದಲ್ಲಿ ದೊರಕುವ ಹಣಕಾಸಿನ ಲಭ್ಯತೆಗನುಗುಣವಾಗಿಯೂ ಹಾಗೂ ಗುತ್ತಿಗೆದಾರರ ಒಪ್ಪಂದದಲ್ಲಿ ತೋರ್ಪಡಿಸುವ ಕಾಲಕ್ಕನುಗುಣವಾಗಿಯೂ ಪೂರ್ತಿಗೊಳಿಸಲು ಪ್ರಯತ್ನಿಸಲಾಗುವುದು.

ಆಳಂದ ತಾಲ್ಲೂಕಿನಲ್ಲಿ ಅಂಗವಿಕಲ, ವೃದ್ಧಾಪ್ಯ ಮತ್ತು ವಿಧವಾ ವೇತನಗಳನ್ನು ೧೯೮೪-೮೫ ರಿಂದ ಈವರೆಗೆ ಮಂಜೂರು ಮಾಡಿರುವ ಬಗ್ಗೆ

೧೮೯೪. ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನಲ್ಲಿ ೧೯೮೪-೮೫ ರಿಂದ ಈವರೆಗೆ ವಿಶ್ರಾಂತಿ ವೇತನ ಪಡೆದುಕೊಂಡಿರುವ ಅಂಗವಿಕಲರು, ವಿಧವೆಯರು ಹಾಗೂ ವೃದ್ಧರ ಸಂಖ್ಯೆ ಎಷ್ಟು?

ಆ) ಬಾಕಿ ಎಷ್ಟು ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದೆ?

ಇ) ಈವರೆಗೂ ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥಗೊಳಿಸದಿರುವುದಕ್ಕೆ ಕಾರಣಗಳೇನು?